# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1213 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಅರವಿಂದ ಕುಮಾರ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 23. 12. 2021 |
| ಉತ್ತರಿಸುವ ಸಚಿವರು: | ಮಾನ್ಯ ಕಾನೂನು ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಜನರು ನ್ಯಾಯಾಲಯದ ಕೆಲಸಕ್ಕಾಗಿ ಬೀದರ್ ಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ಆ ಜನಾಂಗಕ್ಕೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಅಲ್ಲಿ ನೀರು ಇರುವುದಿಲ್ಲ, ಅದಕ್ಕಾಗಿ ಇಲ್ಲಿ ಕುಡಿಯುವ ನೀರಿನ ಘಟಕ (RO) ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಕುಡಿಯುವ ನೀರಿನ ಘಟಕ (RO) ಅಳವಡಿಸುವುದು ಯಾವಾಗ; | ಕುಡಿಯುವ ನೀರಿನ ಘಟಕ (RO) ಈ ನ್ಯಾಯಾಲಯದಲ್ಲಿ ಈ ಮೊದಲೇ ಅಳವಡಿಸಲಾಗಿದ್ದು, ಅದು ಈಗ ಚಾಲ್ತಿಯಲ್ಲಿರುತ್ತದೆ. ಅದನ್ನು ಸಾರ್ವಜನಿಕರು, ಕಕ್ಷಿದಾರರು ಹಾಗೂ ಸಿಬ್ಬಂದಿಗಳು ಉಪಯೋಗಿಸುತ್ತಿದಾರೆ. |
| ಇ) | ಇಲ್ಲಿನ ನ್ಯಾಯವಾದಿಗಳಿಗೆ ಇರುವ 4 ಅಂತಸ್ಥಿನ ಬಾರ್ Association ಕಟ್ಟಡಕ್ಕೆ ಲಿಫ್ಟ್‌ನ ಅವಶ್ಯಕತೆ ಇದ್ದು, ಅದನ್ನು ಅಳವಡಿಸುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಅಳವಡಿಸಲಾಗುವುದು; ಇಲ್ಲವಾದಲ್ಲಿ ಸೂಕ್ತವಾದ ಕಾರಣಗಳನ್ನು ತಿಳಿಸುವುದು? | 2021-22ನೇ ಸಾಲಿಗೆ ಆಧ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕಾಗಿರುವ ನ್ಯಾಯಾಲಯ ಕಟ್ಟಡ ಮತ್ತು ನ್ಯಾಯಾಂಗ ಅಧಿಕಾರಿಗಳ ವಸತಿ ಗೃಹ ನಿರ್ಮಾಣ ಕಾಮಗಾರಿಗಳ ಪಟ್ಟಿಯನ್ನು ರಿಜಿಸ್ಟ್ರಾರ್ ಜನರಲ್ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇವರು ಸಲ್ಲಿಸಿದ್ದು, ಸದರಿ ಪಟ್ಟಿಯಲ್ಲಿ ಬೀದರ್ ನಲ್ಲಿರುವ 4 ಅಂತಸ್ಥಿನ ಬಾರ್ Association ಕಟ್ಟಡಕ್ಕೆ ಲಿಫ್ಟ್‌ನ್ನು ಅಳವಡಿಸುವ ಕಾಮಗಾರಿಯು ಸಹ ರೂ. 32. 00ಲಕ್ಷ ಅಂದಾಜು ಮೊತ್ತದೊಂದಿಗೆ ಸೇರ್ಪಡೆಯಾಗಿರುತ್ತದೆ.<br>ಸದರಿ ಕಾಮಗಾರಿಗಳ ಪಟ್ಟಿಯನ್ನು ಅನುದಾನ ಆಧರಿಸಿ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು. |

ಸಂಖ್ಯೆ: ಲಾ-ಎಲ್‌ಸಿಇ/194/2021

(ಜೆ. ಸಿ. ಮಾಧುಸ್ವಾಮಿ)

ಕಾನೂನು, ಸಂಸದೀಯ ಮತ್ತು

ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು